**ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಹೊಸಕೋಟೆ**

**ಸಿ.ಸಿ. ನಂ.1772/2017**

| | | |
|---|---|---|
| ಹೆಸರು | ರಾಜು | ಪ್ರಾ.ಸಾ.2 |
| ತಂದೆ ಹೆಸರು | ಹನುಮಯ್ಯ | ಚಾ.ಸಾ.4 |
| ವಯಸ್ಸು | 61 ವರ್ಷ | |
| ಕೆಲಸ | ನಿವೃತ್ತ ಹೆಚ್.ಸಿ | ಸಾ.ಪ್ರ.ವ.ಬೋ |
| ಹಾಲಿ ವಾಸ | ಬೆಂಗಳೂರು | ದಿ:-21.09.2024 |

**ಮುಖ್ಯ ವಿಚಾರಣೆ: ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ :-**

ನಾನು 2012 ರಿಂದ 2021 ವರೆಗೆ ನಂದಗುಡಿ ಪೊಲೀಸ್ ಠಾಣೆಯ ಮುಖ್ಯಪೇದೆ ಆಗಿ ಕಾರ್ಯ ನಿರ್ವಹಿಸಿರುತ್ತೇನೆ.

ದಿ:07.04.2017 ರಂದು ಮಧ್ಯಾಹ್ನ 1:30 ಗಂಟೆಗೆ ಚಾಸಾ.1 ರವರು ನೀಡಿರುವ ದೂರನ್ನು ಪಡೆದು, ಪ್ರಕರಣ ದಾಖಲಿಸಿ ಪ್ರ.ವ.ವರದಿ ತಯಾರಿಸಿ, ಮಾನ್ಯ ನ್ಯಾಯಾಲಯಕ್ಕೆ ಹಾಗೂ ಮೇಲಾಧಿಕಾರಿಯವರಿಗೆ ನಿವೇದಿಸಿಕೊಂಡಿರುತ್ತೇನೆ. ದಿ:07.04.2017 ರಂದು ಘಟನಾ ಸ್ಥಳಕ್ಕೆ ಭೇಟಿ ನೀಡಿ ಪಂಚರ ಸಮಕ್ಷಮ ಪಂಚನಾಮೆಯನ್ನು ತಯಾರಿಸಿ, ಪ್ರಕರಣಕ್ಕೆ ಸಂಬಂಧಿಸಿದ ವಸ್ತುಗಳನ್ನು ಅಮಾನತ್ತುಪಡಿಸಿಕೊಂಡಿರುತ್ತೇನೆ.

ಸಾಕ್ಷಿ ದೂರಿನ ಮೇಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದರಿಂದ ದೂರನ್ನು ನಿ.ಪಿ.2 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ.2(ಎ) ಎಂದು ಗುರುತಿಸಲಾಯಿತು. ಸಾಕ್ಷಿ ಪ್ರ.ವ.ವರದಿ ಮೇಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಅದನ್ನು ನಿ.ಪಿ.3 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ.3(ಎ) ಎಂದು ಗುರುತಿಸಲಾಯಿತು. ಸಾಕ್ಷಿ ಪಂಚನಾಮೆಯ ಮೇಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಪಂಚನಾಮೆಯನ್ನು ನಿ.ಪಿ.4 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ.4(ಎ) ಎಂದು ಗುರುತಿಸಲಾಯಿತು. ಸಾಕ್ಷಿ ನ್ಯಾಯಾಲಯದ ಮುಂದಿರುವ ಒಂದು ಶರ್ಟ್ ಮತ್ತು ಬನಿಯನ್ ಅನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಮು.ಮಾಲು-1 ಮತ್ತು 2 ಎಂದು ಗುರುತಿಸಲಾಯಿತು.

**ಪಾಟೀ ಸವಾಲು ಆರೋಪಿತರ ಪರ ವಕೀಲರಿಂದ:-**

ನಿ.ಪಿ.2 ಅನ್ನು ಚಾ.ಸಾ.1 ರವರೇ ಬರೆದುಕೊಟ್ಟಿದ್ದು, ಅವರು ಠಾಣೆಗೆ ಸುಮಾರು ಮಧ್ಯಾಹ್ನ 1:30 ಗಂಟೆಗೆ ಬಂದಿದ್ದರು. ನಿ.ಪಿ.2 ರಲ್ಲಿ ಸಮಯ 4:15 ಗಂಟೆ ಎಂದು ನಮೂದಾಗಿದೆ ಎಂದರೆ ಸರಿ. ಸದರಿ ಸಮಯಗಳ ಮಧ್ಯದ ಅವಧಿಯಲ್ಲಿ ಚಾ.ಸಾ.1 ರವರು ಠಾಣೆಯಲ್ಲಿಯೇ ಇದ್ದರು. ಯಾವುದೇ ಘಟನೆ ನಡೆಯದಿದ್ದರೂ ಸುಳ್ಳು ದೂರಿನ ಆಧಾರದ ಮೇಲೆ ಸುಳ್ಳು ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಪ್ರಕರಣವನ್ನು ದಾಖಲಿಸಿದ ನಂತರ ಸ್ಥಳಕ್ಕೆ ಹೋಗಿ ಪಂಚನಾಮೆಯನ್ನು ಜರುಗಿಸಿರುವುದಿಲ್ಲ. ಮು.ಮಾಲು-1 ಮತ್ತು 2 ಗಳನ್ನು ಚಾ.ಸಾ.1 ರವರು ಠಾಣೆಗೆ ಬಂದಾಗ ಧರಿಸಿದ್ದು, ಠಾಣೆಯಲ್ಲಿಯೇ ಅವುಗಳನ್ನು ಬಿಚ್ಚಿ ನೀಡಿರುತ್ತಾರೆ. ಸದರಿ ಮು.ಮಾಲು-1 ಮತ್ತು 2 ಗಳನ್ನು ನಮಗೆ ಕೊಟ್ಟ ನಂತರ ಚಾ.ಸಾ.1 ರವರು ಬೇರೆ ಬಟ್ಟೆಯನ್ನು ಧರಿಸಿದ್ದು, ಸದರಿ ವಿಷಯವನ್ನು ನಿ.ಪಿ.4 ರಲ್ಲಿ ನಮೂದಿಸಿರುವುದಿಲ್ಲ. ನಿ.ಪಿ.4 ರಲ್ಲಿ ದಿನಾಂಕವನ್ನು ಘಟನೆ ನಡೆಯುವ ಒಂದು ದಿನದ ಮೊದಲಿನ ದಿನಾಂಕವನ್ನು ನಮೂದಿಸಿದ್ದು, ನಂತರ ದಿನಾಂಕವನ್ನು ತಿದ್ದಿರುತ್ತದೆ ಎಂದರೆ ಸರಿ. ಚಾ.ಸಾ.1 ರವರು ಯಾವುದೇ ಬಟ್ಟೆಗಳನ್ನು ನೀಡಿರುವುದಿಲ್ಲ, ಚಾ.ಸಾ.1 ರವರ ಜೊತೆ ಸೇರಿಕೊಂಡು ಅವರಿಗೆ ಸಹಾಯ ಮಾಡುವ ಉದ್ದೇಶದಿಂದ, ಯಾವುದೇ ಘಟನೆ ನಡೆಯದಿದ್ದರೂ ಮು.ಮಾಲು-1 ಮತ್ತು 2 ಗಳನ್ನು ಪ್ರಕರಣಕ್ಕಾಗಿ ಸೃಷ್ಟಿಸಿ ತಂದು ಕೊಟ್ಟಿದ್ದನ್ನು ಸ್ವೀಕರಿಸಿರುತ್ತೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಿಸಲಾಯಿತು)**

**ಓ.ಹೇ.ಕೇ.ಸ.ಇದೆ**

**2ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,**
**ಹೊಸಕೋಟೆ.**